ಕಾರ್ಯಪಾಲಕ ಅಭಿಯಂತರರ ಕಛೇರಿ
ನಂ.2ನೇ ಕಟ್ಟಡಗಳ ವಿಭಾಗ, ಕೆ.ಆರ್.ಸರ್ಕಲ್
ಬೆಂಗಳೂರು

ದೂರವಾಣಿ 22122856, ಫ್ಯಾಕ್ಸ್ 080-22123368
e-mail eebldno2 @ gmail.com

## ಲೋಕೋಪಯೋಗಿ ಇಲಾಖೆ

ಸಂಖ್ಯೆ:ಕಾಪಾಲಅ:ಕವಿ-2:ಸಇಂ-6:21-22/ 4300-301 ದಿನಾಂಕ: 16/03/2022

ಇವರಿಗೆ:
ಕಾರ್ಯದರ್ಶಿಗಳು,
ನ್ಯೂ ಹಾರಿಜನ್ ಶಾಲೆ, ಸರ್ವೆ
ನಂ.115/1, ಹೆಣ್ಣೂರು- ಬಾಗಲೂರು ಮುಖ್ಯರಸ್ತೆ ,
ಬಿದರಹಳ್ಳಿ ಹೋಬಳಿ, ಕೆ.ಆರ್.ಪುರಂ ಪೂರ್ವ,
ಬೆಂಗಳೂರು.

ಮಾನ್ಯರೆ,

| ವಿಷಯ | ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ. |
|---|---|
| ಉಲ್ಲೇಖ | 1. ಕರ್ನಾಟಕ ಸರ್ಕಾರ ಸಚಿವಾಲಯದ ಸುತ್ತೋಲೆ ತಿದ್ದುಪಡಿ ದಿನಾಂಕ 20-11-2021.<br>2. ತಮ್ಮ ಕಛೇರಿ ಪತ್ರ ದಿನಾಂಕ 15-02-2022.<br>3. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ:1439:21-22:ದಿನಾಂಕ 15-03-2022.<br>4. ಈ ಕಛೇರಿ ಪತ್ರ ದಿನಾಂಕ 16-03-2022.<br>5. ತಮ್ಮ ಕಛೇರಿ ಪತ್ರ ದಿನಾಂಕ 16-03-2022. |

.....................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯದರ್ಶಿಗಳು, ನ್ಯೂ ಹಾರಿಜನ್ ಶಾಲೆ, ಸರ್ವೆ ನಂ.115/1, ಹೆಣ್ಣೂರು- ಬಾಗಲೂರು ಮುಖ್ಯರಸ್ತೆ , ಬಿದರಹಳ್ಳಿ ಹೋಬಳಿ, ಕೆ.ಆರ್.ಪುರಂ ಪೂರ್ವ, ಬೆಂಗಳೂರು ರವರು ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಉಲ್ಲೇಖ (2)ರ ಪತ್ರದಲ್ಲಿ ಕೋರಿರುತ್ತೀರಿ. ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರು ಸದರಿ ಕಟ್ಟಡವನ್ನು ಪರಿಶೀಲಿಸಿ ವರದಿಯನ್ನು ವಿಭಾಗ ಕಛೇರಿಗೆ ಸಲ್ಲಿಸಿರುತ್ತಾರೆ.

ಉಲ್ಲೇಖ (1) ಸರ್ಕಾರದ ಸುತ್ತೋಲೆ ತಿದ್ದುಪಡಿಯ ಅನುಸಾರ ಲೋಕೋಪಯೋಗಿ ಇಲಾಖೆ ಸಂಹಿತೆಯ ಅನ್ವಯ ಕಟ್ಟಡದ ಮೌಲ್ಯಮಾಪನವನ್ನು ಪ್ಲಿಂತ್ ಆಧಾರದ ಮೇಲೆ ಲೆಕ್ಕಾಚಾರ ಮಾಡಿದ್ದು, ಉಲ್ಲೇಖ (4)ರ ಪತ್ರದಲ್ಲಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಈ ಕಛೇರಿಯಿಂದ ಪಡೆಯಲು ಕಟ್ಟಡದ ಮೌಲ್ಯದ ಶೇಕಡ 0.05 ರೂ.52,400.00 (ರೂ.ಐವತ್ತೆರಡು ಸಾವಿರದ ನಾಲ್ಕುನೂರು ರೂಪಾಯಿಗಳು ಮಾತ್ರ) ಗಳನ್ನು ಡಿ.ಡಿ. ಮುಖೇನ "ಕಾರ್ಯಪಾಲಕ ಅಭಿಯಂತರರು, ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು" ರವರ ಹೆಸರಿನಲ್ಲಿ ಪಡೆದ್ದು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ, ತಾವು ಉಲ್ಲೇಖ (5)ರ ಪತ್ರದಲ್ಲಿ ಶುಲ್ಕದ ಮೊತ್ತ ರೂ.52,400.00 ಡಿ.ಡಿ.ಸಂಖ್ಯೆ:840387 ದಿನಾಂಕ: 14-03-2022 ಇಂಡಿಯನ್ ಬ್ಯಾಂಕ್, ನ್ಯೂ ಹಾರಿಜನ್ ಕಾಲೇಜು ಶಾಖೆ, ಬೆಂಗಳೂರು ಇಲ್ಲಿ ಪಡೆದು ಸಲ್ಲಿಸಿರುತ್ತೀರಿ.

ಸದರಿ ಶಾಲಾ ಕಟ್ಟಡವನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ದಿನಾಂಕ 14-03-2022ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.6ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರ ಉಪಸ್ಥಿತಿಯಲ್ಲಿ ಸ್ಥಳ ಪರಿಶೀಲಿಸಿ ಈ ಕೆಳಕಂಡಂತೆ ವಿವರಣೆಗಳನ್ನು ಉಲ್ಲೇಖ (3)ರ ಪತ್ರದಲ್ಲಿ ಸಲ್ಲಿಸಿರುತ್ತಾರೆ.

- ಕಾರ್ಯದರ್ಶಿಗಳು, ನ್ಯೂ ಹಾರಿಜನ್ ಶಾಲೆ, ಸರ್ವೆ ನಂ.115/1, ಹೆಣ್ಣೂರು- ಬಾಗಲೂರು ಮುಖ್ಯರಸ್ತೆ, ಬಿದರಹಳ್ಳಿ ಹೋಬಳಿ, ಕೆ.ಆರ್.ಪುರಂ ಪೂರ್ವ, ಬೆಂಗಳೂರು ಕಟ್ಟಡವನ್ನು ದಿನಾಂಕ 14-03-2022 ರಂದು ಜಂಟಿ ಪರಿವೀಕ್ಷಣೆ ಕೈಗೊಳ್ಳಲಾಗಿರುತ್ತದೆ
- ಶಾಲಾ ಸಂಕೀರ್ಣವು ಬ್ಲಾಕ್-ಎ ನಲ್ಲಿ ನೆಲ ಮಹಡಿ ಮತ್ತು 4 ಮೇಲ್ಮಹಡಿಗಳನ್ನು ಒಳಗೊಂಡಿದ್ದು, ಸದರಿ ಕಟ್ಟಡದಲ್ಲಿ ಶಾಲಾ ಕೊಠಡಿಗಳು, ಪ್ರಾಂಶುಪಾಲರ ಕಛೇರಿ ಮತ್ತು ಸಿಬ್ಬಂದಿಗಳ ಕೊಠಡಿ, ಮೆಟ್ಟಿಲುಗಳನ್ನು ಹಾಗೂ ಶೌಚಾಲಯದ ವ್ಯವಸ್ಥೆಯನ್ನು ನಿರ್ಮಿಸಲಾಗಿರುತ್ತದೆ. ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.
- ಕಟ್ಟಡದ ಸ್ಥಿರತೆಗಾಗಿ ಕಾಂಕ್ರೀಟ್ ಸಧೃಡತೆಯನ್ನು Hencon Associates Bangalore ರವರು Rebound Hammer Test & Ultra Sonic Test Bangalore ಅನ್ನು ಕೈಗೊಂಡು ಕಟ್ಟಡವು ಸಧೃಡವಾಗಿರುವುದಾಗಿ ಧೃಡೀಕರಿಸಿರುತ್ತಾರೆ.
- ಶಾಲಾ ಕಟ್ಟಡದ ನಕ್ಷೆಗೆ ಜಂಟಿ ನಿರ್ದೇಶಕರು, ನಗರ ಯೋಜನೆ, ಬಿಬಿಎಂಪಿ ಮಹದೇವಪುರ ವಲಯ, ಬೆಂಗಳೂರು ರವರಿಂದ ಮಂಜೂರಾತಿ ಪಡೆದಿರುವ ಬಗ್ಗೆ ನಕ್ಷೆ ಲಗತ್ತಿಸಿರುತ್ತಾರೆ

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ Hencon Associates Bangalore ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡವು ಪರಿಶೀಲಿಸಲಾಗಿ ಕಟ್ಟಡವು "Structurally Stable" ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡು ಬಂದಿರುವುದರಿಂದ ದಿನಾಂಕ 15-03-2022ರಂದು ಸ್ಥಳ ಪರಿವೀಕ್ಷಿಸಲಾಗಿ ಸದರಿ ಕಟ್ಟಡವು "Structurally Stable" ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು 2021-22ನೇ ಸಾಲಿಗೆ ನೀಡಲಾಗಿದೆ.

ಅಡಕಃ ಉಲ್ಲೇಖ (3)ರ ಪತ್ರದ ಪ್ರತಿ
ಮತ್ತು ನಮೂನೆಗಳು

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು